ಹೋದರೂ ಪರವಾಗಿಲ್ಲ, ಅವಳನ್ನ ಬದುಕಿಸೀ ಬುದ್ಧೀ...' ಎಂದು ಅವನಾದರೂ ಅಂಗಲಾಚಿದ. ನಾಳೆ ತಾನು ಕೊಡಬಹುದಾದ ಚಿಕಿತ್ಸೆಯಿಂದ ಏನಾದರೂ ಜೀವಾಪಾಯವಾದರೆ ಇರಲಿ ಎಂದು ಊರ ಗೌಡ ಕಾಳಿಂಗಯ್ಯನನ್ನೂ, ಶ್ಯಾನುಭೋಗ ಕೇಶವಯ್ಯನನ್ನೂ ಆಕೆಯ ಗಂಡನೊಂದಿಗೇ ಭೇಟಿಮಾಡಿ ವಿವರಿಸಿದ. ಗೌರಮ್ಮನ ಗಂಡನಂತೂ ತನಗೆ 'ಪೇಟೆಗೀಟೆ ಆಸ್ಪತ್ರೆ ಏನೂ ಗೊತ್ತಿಲ್ಲ, ನೀವೇ ಅದೇನು ಮಾಡ್ತೀರೋ ಮಾಡಿ ಬಗೆಹರಿಸಿಕೊಡಿ, ಸಾಯೋತನಕ ಬೇಕಾದರೆ ನಿಮ್ಮ ಮನೆಯಲ್ಲೇ ಜೀತ ಮಾಡ್ಕೊಂಡು ನಿಮ್ಮ ಋಣ ತೀರುಸ್ತೀನಿ...' ಎಂದು ಅಂಗಲಾಚಿದ. ಮುಖಂಡರೂ ಸಮ್ಮತಿಸಿದರು. ಸರಿ ಎಂದು ಬೇಕಾದ ಪರಿಕರಗಳನ್ನು ಜೋಡಿಸಿಕೊಂಡು ನಾಳೆಯೇ ಆಕೆಯ ಮನೆಯನ್ನೇ ಆಪರೇಷನ್ ಥಿಯೇಟರ್ ಮಾಡಿಕೊಳ್ಳುವ ಬಗ್ಗೆ ಆಲೋಚಿಸಿದರು.

ಆದರೆ ಗೌರವ್ವ, 'ಇದರಿಂದ ಒಂದು ವೇಳೆ ನಾನು ಸತ್ತರೂ ಸಾಯಬಹುದು. ಮನೆಯೊಳಗೆ ಮಕ್ಕಳು ಮರಿ ಎಲ್ಲ ಜೀವನ ಮಾಡ್ತಾರೆ. ಅವು ಹೆದರಿಕೊಳ್ತಾವೆ. ಆದ್ದರಿಂದ ನಾನು ದೇವರೆಂದು ನಂಬಿರುವ ಅರಳೀಮರದಡಿಯೇ ಅದೇನು ಚಿಕಿತ್ಸೆ ಮಾಡುತ್ತೀರೋ ಮಾಡಿ. ಸತ್ತರೂ ಆ ದೇವರ ಸನ್ನಿಧಾನದಲ್ಲೇ ಸಾಯುತ್ತೇನೆ. ನನಗೆ ಆ ದೇವರು ಸಾಯಗೊಡುವುದಿಲ್ಲ ಎಂಬ ಭರವಸೆ ಇದೆ...' ಎಂದು ಎಲ್ಲ ಜವಾಬ್ದಾರಿಯನ್ನು ನನ್ನ ಮೇಲೆ ಹಾಕಿಬಿಟ್ಟಳು. ಆಗ ಆಕೆಯ ಬಗ್ಗೆ ಸ್ವಲ್ಪ ನಿಗಾ ವಹಿಸಲೇಬೇಕಾದ ಜವಾಬ್ದಾರಿ ನನ್ನ ಹೆಗಲಿಗೇರಿತು.

ಗುರುಪಾದಪ್ಪ ಆಕೆಯ ಮೊಲೆಗಳನ್ನು ಹರಿತವಾದ ಚಾಕುಗಳನ್ನು ಕಾಯಿಸಿ ಕೊಯ್ದು ಬಿಸಾಡುತ್ತಾನೇನೋ ಎಂದು ನಾನು ನಿರೀಕ್ಷಿಸಿದ್ದೆ. ಸ್ತನದ ವಿಚಾರ ಎಂದಾಕ್ಷಣ ನನಗೆ ಹಿಂದೊಮ್ಮೆ ಈಗಿನ ಕೇರಳ ರಾಜ್ಯಕ್ಕೆ ಸೇರಿರುವ ತಿರುವನಂತಪುರದಲ್ಲಿ ನಡೆದಿದ್ದ ಒಂದು ಘಟನೆ ನೆನಪಿಗೆ ಬಂತು. ತಿರುವನಂತಪುರದ ಮಹಾರಾಜ ದಲಿತ ಮತ್ತು ಹಿಂದುಳಿದ ವರ್ಗದ ನಾದರ ಮತ್ತು ಈಳವ ಜಾತಿಗೆ ಸೇರಿದ ಹೆಣ್ಣುಮಕ್ಕಳು ಬಟ್ಟೆಯಿಂದ ಮೊಲೆಗಳನ್ನು ಮುಚ್ಚಿಕೊಳ್ಳದಂತೆ ನಿರ್ಬಂಧ ಹೇರಿದ್ದ. ಒಂದುವೇಳೆ ಮುಚ್ಚಿಕೊಳ್ಳಲೇಬೇಕೆಂದರೆ ಅದಕ್ಕಾಗಿ 'ಮೂಲಕ್ಕರ'ವನ್ನು ತೆರಬೇಕಾಗುತ್ತಿತ್ತು. ಹೀಗೆ ಮೊಲೆ ತೆರಿಗೆಯನ್ನು ಕಟ್ಟದೇ ಬಟ್ಟೆ ಮುಚ್ಚಿಕೊಂಡಿದ್ದ ಇಬ್ಬರು ದಲಿತ ಹೆಣ್ಣುಮಕ್ಕಳನ್ನು ರಾಜದ್ರೋಹದ ಆರೋಪದ ಮೇಲೆ ಅದಾಗಲೇ ಸಾರ್ವಜನಿಕ ಸ್ಥಳದಲ್ಲಿ ಮರಕ್ಕೆ ನೇಣುಹಾಕಿಸಿದ್ದ.

ಹೆಣ್ಣುಮಕ್ಕಳ ಮೊಲೆಯು ಕುಡಿಯೊಡೆಯುತ್ತಿದ್ದಾಗಿನಿಂದಲೇ ಈ ಮೂಲ ಕರ ಆರಂಭಗೊಳ್ಳುತ್ತಿತ್ತು. ಆದ್ದರಿಂದ ಆ ಜನಾಂಗಗಳ ಹೆಣ್ಣುಮಕ್ಕಳು ಎದೆಮುಚ್ಚುವ ರೂಢಿಯನ್ನೇ ಬಿಟ್ಟುಬಿಟ್ಟಿದ್ದರು. ಇಲ್ಲವೇ ಇನ್ನು ಕೆಲವರು ಕ್ರೈಸ್ತ ಧರ್ಮಕ್ಕೆ ಮತಾಂತರಗೊಂಡು ನಿಲುವಂಗಿಗಳನ್ನು ಹಾಕಿಕೊಳ್ಳುತ್ತಿದ್ದರು. ಯಥಾರೀತಿ ಕರವನ್ನು ಸಂಗ್ರಹಿಸಲು ಮತ್ತು ಸತ್ತುಹೋದವರ, ಹೊಸದಾಗಿ ಚಿಗುರೊಡೆದವರ ಮೊಲೆಯ ವಿವರಗಳನ್ನು ಬರೆದುಕೊಂಡು ಹೋಗಲು ಹಳ್ಳಿಯ ಕರ ವಸೂಲಿಗಾರ, ನಂಗೇಲಿ ಎಂಬಾಕೆಯ ಮನೆಗೂ ಬಂದ. ಮೊಲೆಗಳ ಗಾತ್ರದ ಮೇಲೆ ಆ ಕರವನ್ನು ನಿರ್ಧರಿಸುತ್ತಿದ್ದ ವಸೂಲಿಗಾರನಿಗೆ ತನ್ನ ಮೊಲೆಗಳನ್ನು ತೋರಿಸಲು ಆಕೆ ನಿರಾಕರಿಸಿದಳು. ಅಲ್ಲದೆ ಹೊಸದಾಗಿ ಮದುವೆಯಾಗಿದ್ದ ಆಕೆ ತನ್ನ ಮಜಬೂತಾದ ಮೊಲೆಗಳ ಮೇಲೆ ಎಲ್ಲರೂ ಕಣ್ಣು ಹಾಕುವುದರಿಂದ ಮುಜುಗರಕ್ಕೀಡಾಗಿ ಬಟ್ಟೆಯಿಂದ ಮುಚ್ಚಿಕೊಂಡಿದ್ದಳು. ಕರ ವಸೂಲಿಗಾರ ಆಶ್ಚರ್ಯಗೊಂಡ. ಅದಕ್ಕಾಗಿ ಇಂತಿಷ್ಟು ಕರವನ್ನು ರಾಜರ ಬೊಕ್ಕಸಕ್ಕೆ ಕಟ್ಟಬೇಕೆಂದು ಪಟ್ಟುಹಿಡಿದ. ಬಿಸಿ ರಕ್ತದ ಯುವತಿ, ಯಾರು ಏನು ಹೇಳಿದರೂ ಕೇಳಲಿಲ್ಲ. ಪ್ರತಿಭಟಿಸಿದಳು.

'ಅದು ನನ್ನ ಜನ್ಮಸಿದ್ಧ ಹಕ್ಕು. ನಿಮ್ಮ ರಾಜನೇನಾದರೂ ಬಂದು ಬಟ್ಟೆ ತಂದುಕೊಡುತ್ತಾನೆಯೇ? ಮತ್ತೇಕೆ ಕರವನ್ನು ಕಟ್ಟಬೇಕು?...' ಎಂದು ಪ್ರಶ್ನೆ ಹಾಕಿದಳು. ಅದಕ್ಕೆ ಅವನಲ್ಲಿ ಉತ್ತರವಿರಲಿಲ್ಲ. ಆದರೆ 'ಅದು ರಾಜಾಜ್ಞೆ ಅಷ್ಟೇ. ಕರವನ್ನು ಕಟ್ಟಿ, ನನ್ನ ಪಾಡಿಗೆ ನಾನು ಹೋಗುತ್ತೇನೆ...' ಎಂದ. ವಾಗ್ವಾದಗಳು ನಡೆದೇ ಹೋದವು. 'ನನ್ನ ಮೊಲೆ, ನನ್ನಿಷ್ಟ...' ಎಂದು ಅವಳೂ ಪಟ್ಟುಹಿಡಿದಳು. 'ಅದೆಲ್ಲ ಗೊತ್ತಿಲ್ಲ, ಕಟ್ಟಿ ಅಷ್ಟೇ...' ಎಂದು ಊರವರನ್ನೆಲ್ಲ ಮನೆಯ ಮುಂದೆ ಸೇರಿಸಿ ಅವನೂ ಪಟ್ಟುಹಿಡಿದ. 'ಇರು ಕೊಡ್ತೀನಿ...' ಎಂದು ಹಣ ತರುವವಳಂತೆ ಒಳಹೋದಳು. 'ಇದನ್ನೇ ಆಗಲೇ ಹೇಳಿದ್ದರೆ ಇಷ್ಟೆಲ್ಲ ಜಗಳವೇ ಇರುತ್ತಿರಲಿಲ್ಲ...' ಎಂದು ಅವನೂ ಸಮಾಧಾನಕ್ಕೆ ಬಂದ. ನೆರೆದಿದ್ದ ಜನ ತಮ್ಮ ತಮ್ಮ ಕೆಲಸದ ಮೇಲೆ ತೆರಳಿದರು.

ಒಳಗೆ ಹೋಗಿ ನಂಗೇಲಿ ಹರಿತವಾದ ಚಾಕುವಿನಿಂದ ತನ್ನೆರಡು ಮೊಲೆಗಳನ್ನು ಕೊಯ್ದು ಬಾಳೆ ಎಲೆಯಲ್ಲಿಟ್ಟುಕೊಂಡು ಕರ ವಸೂಲಿಗಾರನ ಮುಂದೆ ಭಿಕ್ಷೆ ನೀಡುವವಳಂತೆ ಬಂದು ನಿಂತಳು. ಆಕೆಯ ಎದೆಯಿಂದ ಧಾರಾಕಾರ ರಕ್ತ ಹರಿಯುತ್ತಿತ್ತು. ತೆಂಗಿನಕಾಯಿಯ ಗಾತ್ರದ ಆ ಎರಡು ಮೊಲೆಗಳು ರಕ್ತದ ಕಣ್ಣೀರನ್ನು ಸುರಿಸುತ್ತ ಎಲೆ ಮೇಲೆ ಕುಳಿತಿವೆ!... ಭಯಭೀತಗೊಂಡ ಆತ ಕಿರುಚಿಬಿಟ್ಟ. ಆತನ ಕಿರುಚಾಟಕ್ಕೆ ನಿಟ್ಟುಸಿರಿಟ್ಟು ಹೋಗಿದ್ದ ಜನರೆಲ್ಲ ತಿರುಗಿ ಓಡಿಬಂದರು.

ರಕ್ತದ ನಿರಂತರ ಹರಿತದಿಂದ ತಲೆತಿರುಗಿ ಬಿದ್ದ ನಂಗೇಲಿ ಮತ್ತೆ ಏಳಲಿಲ್ಲ. ಇನ್ನೂ ಮಕ್ಕಳಾಗಿರದ ಆಕೆಯ ಗಂಡ ಚಿರುಕಂದನ್‌ನ ನೋವನ್ನು ವರ್ಣಿಸಲಸದಳವಾಗಿತ್ತು. ಆಕೆಯ ಸಂಸ್ಕಾರಕ್ಕೆಂದು ನಿರ್ಮಿಸಿದ್ದ ಚಿತೆಗೆ ಹಾರಿ ಆತನೂ ಉರಿದುಹೋದ! ಇದುವರೆಗೂ ಗಂಡ ಸತ್ತರೆ ಹೆಣ್ಣು ಚಿತೆಗೆ ಹಾರಿ 'ಸತಿ' ಹೋಗಿ ಜೀವ ಕಳೆದುಕೊಂಡಿದ್ದನ್ನು ನೋಡಿದ್ದೆ. ಆದರೆ ಹೆಂಡತಿಯ ಚಿತೆಗೆ ಹಾರಿದ ಮೊದಲ 'ಪತಿ' ಪ್ರಕರಣ ಇದಾಗಿತ್ತು.

ಆ ಶತಮಾನದ ಮೊದಲರ್ಧದಲ್ಲಿ ಅನೇಕ ಕಾನೂನುಗಳನ್ನು ಜಾರಿಗೆ ತರುವುದು, ತೆಗೆದು ಹಾಕುವುದನ್ನು ಮಾಡುತ್ತಿದ್ದ ರಾಜ ಸುಮಾರು ನಲವತ್ತು ವರ್ಷಗಳ ಕಾಲ ನಡೆದ ಈ ಚನ್ನಾರ್ ಚಳುವಳಿಯ ಉಚ್ಛ್ರಾಯವಾದ ಈ ಘಟನೆಯಿಂದ ಕಂಗೆಟ್ಟುಹೋದ. ಮದರಾಸಿನ ಬ್ರಿಟಿಷ್ ಗವರ್ನರನಿಂದ ತೀವ್ರ ಒತ್ತಡಕ್ಕೊಳಪಟ್ಟು ಮೂಲಕರವನ್ನು ತೆಗೆದು ಹಾಕಿದ. ಅಲ್ಲಿಂದ ಆ ಊರಿಗೆ ಮೂಲಾಚಿಪರಂಬು ಎಂಬ ಹೆಸರಾಗಿಹೋಯಿತು.

ದುರಂತವೆಂದರೆ ಆ ಜನಾಂಗದ ಇನ್ನೂ ಎಷ್ಟೋ ಮಹಿಳೆಯರು ಸಂಪ್ರದಾಯವೆಂಬಂತೆ ಇವತ್ತಿಗೂ ರವಿಕೆಯನ್ನು ತೊಡುವುದೇ ಇಲ್ಲ.

ಇನ್ನು ಗೌರವ್ವನ ವಿಚಾರಕ್ಕೆ ಬರುವೆ. ಅಂದು ಬೆಳಗ್ಗೆ ಎಂಟು ಗಂಟೆಗೇ ನನ್ನ ಬುಡದಲ್ಲಿ ನಾಲ್ಕು ಸೀರೆಗಳನ್ನು ಮರೆಮಾಡಿ ಕಟ್ಟಿ ಆಕೆಯನ್ನು ಮಲಗಿಸಲಾಗಿತ್ತು. ಕ್ಯಾನ್ಸರ್‌ಗೆ ಒಳಗಾಗಿದ್ದ ಆಕೆಯ ಒಂದು ಸ್ತನವನ್ನು ಹೊರತುಪಡಿಸಿ ಬೇರೆಲ್ಲ ಭಾಗವನ್ನು ನೀರುಹಾಕಿ ನೆನೆಸಿದ ಗೋಣಿಚೀಲದಿಂದ ಮುಚ್ಚಲಾಗಿತ್ತು. ಹೊರಭಾಗದಲ್ಲಿ ಆಕೆಗೆ ಕಾಣದಂತೆ ಸೌದೆಯ ಪಾಳುಗಳನ್ನು ಹಾಕಿ ಜೋರಾದ ಬೆಂಕಿಯನ್ನು ಹಾಕಲಾಗಿತ್ತು. ಮಾವಿನಕಾಯಿ ಗಾತ್ರದ ಎರಡು ಬೆಣಚುಕಲ್ಲುಗಳನ್ನು ಅದರಲ್ಲಿ ಹಾಕಿ ಅದು ಲಾವಾರಸದಂತೆ ಕರಗುವಷ್ಟು ಉರಿಯನ್ನು ತಾಗಿಸಲಾಗಿತ್ತು.

ಗೌರವ್ವನಿಗೆ ಎಂಥದೋ ಗಿಡಮೂಲಿಕೆಯ ರಸವನ್ನು ಕುಡಿಸಿ, ಮೂಗಿಗೆ ಎಂಥದೋ ಪೌಡರಿನ ಗಮಲನ್ನು ಹಿಡಿಯುತ್ತಿದ್ದಂತೆ ಪ್ರಜ್ಞೆ ತಪ್ಪಿ ಹೋದಳು... ಬಡಬಡನೆ ಬಿಸಿಯಾಗಿ ಕುದ್ದು ಬಿಳಿಚಿಕೊಂಡಿದ್ದ ಒಂದು ಕಲ್ಲನ್ನು ಇಕ್ಕಳದಲ್ಲಿ ಹಿಡಿದು ತಂದು ಆಕೆಯ ಸ್ತನದ ಮೇಲೆ ಇಡುತ್ತಿದ್ದಂತೆ ಪ್ರಜ್ಞೆ ತಪ್ಪಿದ್ದ ಗೌರವ್ವನಂಥ ಗೌರವ್ವನೇ ಕಿಟಾರನೆ ಕಿರುಚಿಬಿಟ್ಟಳು. ಲೋಕಾಭಿರಾಮವಾಗಿ ಎತ್ತೆತ್ತಲೋ ನೋಡುತ್ತ ನಿಂತಿದ್ದ ನನ್ನೆಲ್ಲ ಎಲೆಗಳು ಕಣ್ಣುಗಳಂತೆ ಆಕೆಯ ಕಡೆಗೆ ತಿರುಗಿದವು. ಆಕೆಯ ಕೈಕಾಲುಗಳನ್ನು ಭದ್ರವಾಗಿ ಹಿಡಿದಿದ್ದ ನಾಲ್ಕೈದು ಬಲಾಢ್ಯರೂ ಅಲ್ಲಾಡಿಹೋದರು. ಆಕೆ ನನ್ನನ್ನು ನಂಬಿದ್ದಾಳೆ, ಆಕೆಗೆ ಏನೂ ಆಗದಂತೆ ಬಲವನ್ನು ಕೊಡು ಎಂದು ಪ್ರಾರ್ಥಿಸುತ್ತಲೇ ಇದ್ದೆ. ಮೊದಲ ಕಲ್ಲು ಕರಕರನೆ ಮೊಲೆಯ ಮೆತ್ತನೆಯ ಮಾಂಸವನ್ನು ಸುಟ್ಟುಹಾಕಿದ ಬಿರುಸಿಗೆ ಆಕೆ ಮತ್ತೆ ಮೂರ್ಛೆಹೋದವಳು ಏಳಲೇ ಇಲ್ಲ. ಗುರುಪಾದಪ್ಪ ಆ ಕಲ್ಲನ್ನು ತೆಗೆದು ಕ್ಯಾನ್ಸರಿನ ಗಂಟು ಕರಗಿದೆಯೇ ಎಂದು ನೋಡಿದ. ಅದರಲ್ಲಿ ಸ್ವಲ್ಪ ಉಳಿದರೂ ಮತ್ತೊಮ್ಮೆ ಇದೇ ಚಿಕಿತ್ಸೆಯನ್ನು ನೀಡಬೇಕಾಗುತ್ತದೆಂದು, ಅದಕ್ಕೆ ಒಮ್ಮೆ ನೋವು ತಿಂದ ಯಾರೂ ಸತ್ತರೂ ಪರವಾಗಿಲ್ಲ ಎಂದುಕೊಂಡು ಇನ್ನೊಮ್ಮೆ ಬರುವುದಿಲ್ಲವೆಂಬುದು ಚೆನ್ನಾಗಿ ಗೊತ್ತಿತ್ತು. ತಕ್ಷಣ ಇನ್ನೊಂದು ಕಲ್ಲನ್ನು ತಂದು ಅದೇ ಜಾಗದಲ್ಲಿ ಸ್ವಲ್ಪ ಪಕ್ಕಕ್ಕೆ ಹಿಡಿದು ಅಳಿದುಳಿದಿದ್ದ ತುಣುಕುಗಳನ್ನೂ ಸುಟ್ಟುಹಾಕಿದ. ಆ ಕಲ್ಲನ್ನು ಪೂರ್ಣ ತಣ್ಣಗಾಗುವ ಮೊದಲೇ ಆ ಕಡೆಗೆ ತೆಗೆದು ಎಸೆದು ಜೋರಾಗಿ ಗಾಳಿ ಬೀಸುವಂತೆ ಹೇಳಿದ. ತಣ್ಣಗಾಗುವಂಥ ಹಸಿರುಬಣ್ಣದ ಎಂಥದೋ ಲೇಹ್ಯವನ್ನು ಗಾಯದ ಮೇಲೆ ಹಚ್ಚಿದ. ಅಲ್ಲಿದ್ದ ಜನ ಮೊರದಿಂದ ಗಾಳಿ ಬೀಸುತ್ತಿದ್ದರು. ನಾನೂ ನನ್ನ ಕೈಲಾದಷ್ಟು